ಬಿಡುವರು. ಆದರೆ ಅವರ ಸ್ನೇಹಿತರು, 'ಭಾವೇಶ್ ಈ ಉದ್ದ ಕೂದಲಿನಲ್ಲಿ ನೀನು ತುಂಬಾ ಹ್ಯಾಂಡ್ಸಮ್ ಕಾಣುತ್ತಿದ್ದೀಯ' ಎಂದಾಗ ಉಬ್ಬಿಹೋಗುವರು.

ಅವರು ಹಿಡಿಯ ಹೊರಟ ಲಕ್ಷ್ಯ ದೊಡ್ಡದಿತ್ತು. ಹಾಸ್ಟೆಲ್ ನಿರ್ಮಾಣ ಅರ್ಧಕ್ಕೂ ತಲುಪಿರಲಿಲ್ಲ. ದಿನದಲ್ಲಿ 18ರಿಂದ 20 ಗಂಟೆಗಳು ಮೋಂಬತ್ತಿ ತಯಾರಿಕೆಯಲ್ಲಿ ತೊಡಗಿದ್ದುಂಟು. ಮೋಂಬತ್ತಿಗಳನ್ನು ಹೆಚ್ಚು ಹೆಚ್ಚು ಮಾರಾಟ ಮಾಡಬೇಕು, ಹೆಚ್ಚು ಹೆಚ್ಚು ಹಣವನ್ನು ಒಟ್ಟುಗೂಡಿಸಬೇಕು. ಮನೋಜ್ ಖೇರ್ಕರ್ ಮತ್ತು ಸೋನಾಲ್ ಅವರಿಗೆ ಇನ್ನೂ 50ರಿಂದ 60 ಲಕ್ಷಗಳು ಈ ಪ್ರಾಜೆಕ್ಟ್‌ಗೆ ಬೇಕಿದೆ ಎಂದು ತಿಳಿದಿತ್ತು. ಪುಟ್ಟದಾಗಿ ಆರಂಭವಾದದ್ದು, ನೋಡ ನೋಡುತ್ತಿದ್ದಂತೆ ಪ್ರಾಜೆಕ್ಟ್ ದೊಡ್ಡದಾಗಿತ್ತು. ಪ್ರತಿಯೊಬ್ಬರು ಒಮ್ಮೆ ನಿರ್ಮಾಣ ಮಾಡಿ ನಿಲ್ಲಿಸುವುದಾದರೆ ಚೆನ್ನಾಗಿಯೇ ಮಾಡೋಣ ಎಂದು ಹೇಳುವರು. ಎಲ್ಲಿಯೂ ಗುಣಮಟ್ಟದಲ್ಲಿ ರಾಜಿ ಬೇಡ ಎನ್ನುವರು. ಯಾವ ಯಾವ ಏಜೆನ್ಸಿಗಳು ಈ ನಿರ್ಮಾಣದ ಕಾರ್ಯದಲ್ಲಿ ಜೊತೆಯಾಗಿದ್ದವೋ, ಅವರಿಗೂ ಇದು ಸ್ವಾರ್ಥದ ಕೆಲಸ ಅಲ್ಲ, ಪರಮಾರ್ಥದ ಕಾರ್ಯ ಎಂದು ಅರಿವಿತ್ತು. ಅವರೆಲ್ಲರ ಒತ್ತಾಸೆ ಹಾಸ್ಟೆಲ್ ನಿರ್ಮಾಣಕ್ಕಿತ್ತು. ಭಾವೇಶ್ ಮತ್ತು ಅವರ ಅಂಧ ಮಿತ್ರರೊಡನೆ ಅವರ ಸ್ನೇಹ ಅರಳಿತ್ತು. ಹಾಗೆಂದೇ ಅವರುಗಳು ಕೂಡಾ ಲಾಭಕ್ಕಲ್ಲದೆ, ಒಂದು ರೀತಿಯ ಸಮರ್ಪಣಾ ಭಾವದಿಂದ ಈ ಪ್ರಾಜೆಕ್ಟ್‌ನಲ್ಲಿ ಪಾಲ್ಗೊಂಡಿದ್ದರು.

ಹಲವು ಬಾರಿ ಅವರೆಲ್ಲ ಜೊತೆಯಾಗಿ ಕುಳಿತು ಗೀತ ಸಂಗೀತದ ಕಾರ್ಯಕ್ರಮ ಆಯೋಜಿಸುತ್ತಿದ್ದರು. ಇದೇ ಕಾರಣಕ್ಕೆ ಪುಣೆಯ ಯಾವುದೋ ಕಾರ್ಯಕ್ರಮದಲ್ಲಿ ಮನೋಜ್ ಖೈರ್ಕರ್ ಅವರು ಭಾವೇಶ್ ಅವರನ್ನು ಓರ್ವ ಸಜ್ಜನರೊಡನೆ ಭೆಟ್ಟಿ ಮಾಡಿಸಿದರು. ಅವರ ಹೆಸರು ರಾಮ್‌ನಿವಾಸ್ ಬಂಸಲ್ ಆಗಿತ್ತು. ಪುಣೆ ಶಹರಿನಲ್ಲಿ ಅವರ ಕನ್‌ಸ್ಟ್ರಕ್ಷನ್ ಕಂಪನಿ ಇತ್ತು. ನೀತಾಭಾವೇಶ್ ದಂಪತಿಗಳ ಕತೆ ಕೇಳಿ ಬಂಸಲ್ ಅವರಿಗೆ ಖುಷಿಯಾಗಿತ್ತು. ಅವರು ತಮ್ಮ ತಾಯಿಯವರ ಬಗ್ಗೆ ಹೇಳಿದರು. ಅವರ ತಾಯಿ ಏಳು ವರ್ಷದ ವಯಸ್ಸಿನಲ್ಲಿಯೇ ಅಂಧರಾಗಿದ್ದರು. ಅವರದು ಸಂಪ್ರದಾಯದ ಮಾರವಾಡಿ ಸಮಾಜ. ಹಾಗಿದ್ದೂ ಎಲ್ಲರ ವಿರೋಧವನ್ನು ಎದುರಿಸಿ ಬಂಸಲ್ ಅವರ ತಂದೆ, ಅವರ ತಾಯಿಯನ್ನು ವಿವಾಹವಾಗಿದ್ದರು. ಇದೆಲ್ಲ ನಡೆದು ಬಹಳ ವರ್ಷಗಳಾಗಿತ್ತು. ಆದರೆ ಅವರು ಆ ಕತೆಯನ್ನು ಬಹಳ ಸುಂದರವಾಗಿ ನೀತಾ ಮತ್ತು ಭಾವೇಶ್ ಅವರ ಕತೆಯೊಡನೆ ಜೋಡಿಸಿದರು. ಅವರು ಹೇಳಿದರು, 'ನಾನು ಪ್ರತಿವರ್ಷ ಈ ರೀತಿ ಅರ್ಧಂಬರ್ಧ ಹಣದ ಅಭಾವದಿಂದ ನಿಂತು ಹೋದ ಪ್ರಾಜೆಕ್ಟ್‌ಗಳಿಗೆ, ಅದರಲ್ಲೂ ಅಂಧ ವ್ಯಕ್ತಿಗಳಿಗೆ ಸಂಬಂಧಿಸಿರುವ ಯೋಜನೆಗಳಿಗೆ ಸಹಾಯ ಮಾಡುತ್ತಲೇ ಇರುತ್ತೇನೆ. ಭಾವೇಶ್ ಭಾಯಿ, ನಾನು ನಿಮಗೆ ಏನು ಸಹಾಯ ಮಾಡಲಿ ಹೇಳಿ?' ಎಂದು ಕೇಳಿದರು.

ಆ ಕಾರ್ಯಕ್ರಮದ ನಂತರ ರಾಮ್‌ನಿವಾಸ್ ಅವರು ಆಗ್ರಹಪೂರ್ವಕವಾಗಿ ಮನೋಜ್ ಅವರನ್ನು, ಭಾವೇಶ್ ಮತ್ತು ನೀತಾ ಅವರನ್ನು ತಮ್ಮ ಮನೆಗೆ ಕರೆದೊಯ್ದರು. ಅಲ್ಲಿ ಅವರು ಮನೋಜ್ ಅವರ ಕೈಯಲ್ಲಿ 25 ಲಕ್ಷ ರೂಪಾಯಿಯ ಚೆಕ್ ಇಟ್ಟು, ಆದಷ್ಟು ಬೇಗ ಹಾಸ್ಟೆಲ್ ನಿರ್ಮಾಣ ಪೂರೈಸಲು ಹೇಳಿದರು. ಈ ರೀತಿ ದಾನವನ್ನು ತೆಗೆದುಕೊಳ್ಳಲು ಭಾವೇಶ್ ಅವರಿಗೆ ಇಷ್ಟವಿರಲಿಲ್ಲ. ತಕ್ಷಣ ಅವರು ಹೇಳಿದರು, 'ಇಲ್ಲ ಸರ್, ಈ ಹಣ ಬೇಡ. ನಿಧಾನವಾಗಿಯಾದರೂ ನಮ್ಮ ನಿರ್ಮಾಣ ಕಾರ್ಯ ಮುಗಿಯುತ್ತದೆ. ಇವತ್ತಲ್ಲ ನಾಳೆ ಅದು ಪೂರ್ಣಗೊಳ್ಳುತ್ತದೆ'. ರಾಮ್‌ನಿವಾಸ್ ಅವರು ಏನಾದರೂ ಹೇಳಬೇಕು, ಅದಕ್ಕೆ ಮೊದಲೇ ಮನೋಜ್ ಅವರು ಅತ್ಯಂತ ಕಟುವಾಗಿ ಹೇಳಿದರು, 'ಒಂದು ಕಡೆ ನೀನು ನನ್ನನ್ನು ಅಣ್ಣ ಎಂದು ಕರೆಯುತ್ತೀಯ, ಅಣ್ಣನ ಮಾತು ಸ್ವಲ್ಪವಾದರೂ ಕೇಳು. ಎಲ್ಲ ಒಳ್ಳೆಯ ಕೆಲಸ ಮಾಡುವ ಕಾಂಟ್ರಾಕ್ಟ್ ನೀನೊಬ್ಬನೇ ತೆಗೆದುಕೊಂಡಿದ್ದೀಯೇನು? ನಮಗೂ ಈ ಪುಣ್ಯದ ಕೆಲಸದಲ್ಲಿ ಕೈಜೋಡಿಸಲು ಬಿಡು' ಎಂದರು.

ಈ ಆಗ್ರಹದ ಮಾತುಗಳ ಹಿಂದಿದ್ದ ಭಾವವನ್ನು ಅರಿತ ಭಾವೇಶ್, ಮನಸ್ಸು ಹಿಂಜರಿದರೂ ಆ ಚೆಕ್ ಅನ್ನು ತೆಗೆದುಕೊಳ್ಳಬೇಕಾಯಿತು. ಇಲ್ಲಿ ದಾನ ನೀಡಿದ ದಾತರಾಗಿ ಅವರು ಅಷ್ಟೆತ್ತರದಲ್ಲಿ ನಿಂತಿರಲಿಲ್ಲ. ಭಾವೇಶರ ಸಹೋದರನಂತೆ ಹೆಗಲು ಕೊಟ್ಟು ಜೊತೆ ನಿಂತಿದ್ದರು. ಮನೋಜ್ ಮತ್ತು ರಾಮ್‌ನಿವಾಸ್ ಬಂಸಲ್ ಅವರ ಈ ಸಹಾಯದಿಂದ ಹಾಸ್ಟೆಲ್ ಕಟ್ಟಡದ ಕೆಲಸ ಮುಂದುವರೆಯಿತು. ಬಂಸಲ್ ಅವರಿಗೆ ಯಾವುದೇ ಹೆಸರು ಪ್ರಸಿದ್ಧಿ ಬೇಕಿರಲಿಲ್ಲ. ನನ್ನ ಹೆಸರನ್ನು ಉಲ್ಲೇಖಿಸುವ ಅಗತ್ಯವೇ ಇಲ್ಲ ಎಂದಿದ್ದರು. ಆದರೆ ಭಾವೇಶ್, ಭಾವಸಾ ಮತ್ತು ಮನೋಜ್ ಅವರ ಅಭಿಪ್ರಾಯ ಒಂದೇ ಆಗಿತ್ತು. ಅವರ ಉದಾರ ಮನಸ್ಸಿನ ಈ ಸಹಾಯವನ್ನು, ಅವರ ಸಮರ್ಪಣಾ ಭಾವವನ್ನು ಹೀಗೆಯೇ ಮರೆಯಾಗಲು ಬಿಡಬಾರದು. ಈ ಪ್ರಾಜೆಕ್ಟ್‌ಗೆ ರಾಮ್‌ನಿವಾಸ್ ಅವರ ತಾಯಿಯ ಹೆಸರನ್ನು ನೀಡಲು ಬಯಸಿದರು. ಬಹಳಷ್ಟು ಒತ್ತಾಯಿಸಿದ ಮೇಲೆ ಬಂಸಲ್ ಇದಕ್ಕೆ ಒಪ್ಪಿದರು. ಹಾಸ್ಟೆಲಿನ ನಿರ್ಮಾಣ ಪೂರ್ಣಗೊಂಡಾಗ ಅದಕ್ಕೆ 'ಮಾತೃಶ್ರೀ ಮಹಾದೇವೀ ಚೈತರಾಮ್ ಬಂಸಲ್' ಹೆಸರು ಕೊಡುವುದಾಗಿ ತೀರ್ಮಾನಿಸಿದರು.

ಸಹೋದರರಂತೆ ಜೊತೆ ನಿಂತ ಸ್ನೇಹಿತರ ಒತ್ತಾಯ ಹೆಚ್ಚಿತ್ತು. ಮನೋಜ್ ಖೇರ್ಕರ್ ಅವರ ಇನ್ನೊಬ್ಬರು ಸ್ನೇಹಿತರಾದ ಜಯಂತ್ ಯರೋಡೇಕರ್ ಹತ್ತು ಲಕ್ಷದ ಸಹಾಯವನ್ನು ಕಳುಹಿಸಿ ಕೊಟ್ಟರು. ಜೊತೆಗೇ ಮುಂಬಯಿಯ ಚಾರ್ಟಡ್ ಅಕೌಂಟೆಂಟ್ ಅಸೋಸಿಯೇಷನ್ ಜೊತೆಗೆ ಸೇರಿ ರಮೇಶ್ ಕಚೋಲೀಯಾ ಅವರು 2.5 ಲಕ್ಷ ಕಳುಹಿಸಿದರು. ನಿತಿನ್ ಭಾಯಿ ಸೋನಾವಾಲಾ, ಮುಂಬಯಿ ಜೈನ್ ಯುವಕ ಸಂಘದ ಅಧ್ಯಕ್ಷರಾಗಿದ್ದರು. ಅವರು 1 ಲಕ್ಷ, ಇಚಲ್ಕರಂಜೀ ಮಹೇಶ್ವರೀ ಸಮಾಜ್ ಅವರ ಕಡೆಯಿಂದ ಶ್ರೀಮತಿ ಅನಿತಾ ಬಿಯಾಣೀ ಮತ್ತು ಶ್ರೀಮತಿ ರಾಧಾ ಚಾಂಡಕ್ ಅವರು 3.5 ಲಕ್ಷ ಈ ಹಾಸ್ಟಲ್ ನಿರ್ಮಾಣಕ್ಕೆ ನೀಡಿದರು. ಭಾವಸಾ ಅವರಂತೂ ಆರಂಭದಿಂದಲೇ ತನು ಮನ ಧನವನ್ನು ಹಾಸ್ಟೆಲ್ ನಿರ್ಮಾಣದಲ್ಲಿ ತೊಡಗಿಸಿದ್ದರು. ಅವರ ಜೊತೆ ಜೊತೆಗೆ ಅವರ ಪರಿವಾರದ ಪ್ರತಿಯೊಬ್ಬರೂ ಒಂದಲ್ಲ ಒಂದು ರೂಪದಲ್ಲಿ ಈ ಪ್ರಾಜೆಕ್ಟ್‌ಗೆ ತಮ್ಮ ಯೋಗದಾನವನ್ನು ನೀಡಲು ಉತ್ಸುಕರಾಗಿದ್ದರು.

ಅದೇ ದಿನಗಳಲ್ಲಿ ಪುಣೆ ಶಹರಿನ 'ಸಿ.ಎ. ಅಸೋಸಿಯೇಷನ್ ಕಾನ್ಫರೆನ್ಸ್' ಮಹಾಬಲೇಶ್ವರದ



ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪಡೆಯುತ್ತಿರುವ ಭಾವೇಶ್